ಶ್ರೀ ಎ. ಡಿ. ಬಿಳಿಗೌಡ.—ಸ್ವಾಮಿ, ಸಂಬಂಧಪಟ್ಟ ಪಂಚಾಯತಿಯವರು ಅಂದಾಜಿನ ಶೇಕಡ 10 ರಷ್ಟು ವಂತಿಗೆ ಪಾವತಿ ಮಾಡಿದರೆ, ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಗ್ರಾಮಗಳ ಪೈಕಿ, ಒಂದೆರಡು ಪಂಚಾಯತಿಗಳು ಅಷ್ಟನ್ನೂ ಕೊಟ್ಟರೂ ಕೊಡಬಹುದು. ಆದರೆ ಇನ್ನು ಕೆಲವು ಊರುಗಳು ಬೆಂಗಾಡು ಪ್ರದೇಶವಾಗಿ, ಕುಡಿಯುವ ನೀರಿಗೆ ಮುಗ್ಗಟ್ಟಾಗಿದೆ. ಭಾವಿ ಎಷ್ಟು ಆಳ ತೆಗೆದರೂ ನೀರು ಬರದೆ ಇರುವುದರಿಂದ ಮತ್ತು ಪಕ್ಕದಲ್ಲಿ ತುಂಗಾ ನದಿ ಹರಿಯುತ್ತಾ ಇರುವುದರಿಂದ ನೀರಿನ ವ್ಯವಸ್ಥೆ ಮಾಡಿಕೊಡುವುದಕ್ಕೆ ಆಗುತ್ತದೆಯೇ ?

† ಶ್ರೀ ಎಚ್. ಸಿದ್ದವೀರಪ್ಪ.—ಈಗ ಇರತಕ್ಕ ಗೌವರ್ನಮೆಂಟ್ ಆರ್ಡರ್ ಪ್ರಕಾರ ಯೋಜನೆ ಮಾಡಬೇಕೇ ವಿನಹ, ಹಾಗೇ ಹೇಳಲಿಕ್ಕೆ ಆಗುವುದಿಲ್ಲ. ತಮಗೆ ಗೊತ್ತಿದೆ ಎನ್. ಆರ್. ಡಬ್ಲ್ಯು. ಸ್ಕೀಮ್ ತೆಗೆದುಕೊಳ್ಳಬೇಕಾದರೆ ಹತ್ತನೇ ಒಂದು ಅಂಶ ಹಣ ಕೊಡಬೇಕು. ಎಲ್ಲಾದರೂ ಶೇಕಡ 50 ಕ್ಕಿಂತ ಮೇಲೆ ನಿಮ್ಮ ವರ್ಗದವರು ಇದ್ದರೆ, ಅಂತಹ ಕಡೆ ಹಾಗೆ ಕೊಡಬೇಕು ಎಂದು ಇದೆ. ಬಾಕಿ ಕಡೆ ಆ ರೀತಿ ಮಾಡುವುದು ಕಷ್ಟ. ಅಲ್ಲಿ ಮಿನಿಮಮ್ ಬೇಸ್ಡ್ ನೀಡ್ಸ್ ಪ್ರೋಗ್ರಾಮ್ ಪ್ರಕಾರ ಮಾಡಬೇಕಾಗುತ್ತದೆ. ಅಂತಹದು ಏನಾದರೂ ಇದ್ದರೆ, ವಿಚಾರ ಮಾಡೋಣ. ಅವರ ಭಾಗದ ವಂತಿಗೆ ಕೊಡಬೇಕು ಎಂದು ಸ್ಕೀಮ್ ಪ್ರಕಾರ ಇರುವುದರಿಂದ, ದುಡ್ಡು ಕೊಡದೆ ಹಾಗೆ ಮಾಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎ. ಡಿ. ಬಿಳಿಗೌಡ.—ಸ್ವಾಮಿ, ಆ ಗ್ರಾಮಗಳಿಂದ ಮಾಹಿತಿ ತರಿಸಿಕೊಂಡು ಪರಿಶೀಲನೆ ಮಾಡುತ್ತೀರಾ ? ಆದರ ಆಗು ಹೋಗುಗಳ ಬಗ್ಗೆ ಅಂಕಿ ಅಂಶಗಳ ಬಗ್ಗೆ ಆ ಊರುಗಳಿಗೆ ಸಂಬಂಧ ಪಟ್ಟ ಹಾಗೆ ರಿಪೋರ್ಟ್ ತರಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ತಮ್ಮ ಲ್ಯಾಂಡ್ ರೆವೆನ್ಯೂ ಅಸ್ಸೆನ್‌ಮೆಂಟ್‌ನಿಂದ ಬರತಕ್ಕ ವಂತಿಗೆ ಏನಾದರೂ ಮುರಿದುಕೊಳ್ಳತಕ್ಕ ಅವಶ್ಯಕತೆ ಇದ್ದರೆ ವಿಚಾರ ಮಾಡೋಣ.

ಶ್ರೀ ಎ. ಡಿ. ಬಿಳಿಗೌಡ.—ಆ ಬಗ್ಗೆ ಕೇಂದ್ರಸರ್ಕಾರದವರ ಸಹಾಯ ಏನಾದರೂ ದೊರಕುವುದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಅದೆಲ್ಲಾ ಕೇಂದ್ರಸರ್ಕಾರವರ ಸ್ಕೀಮ್. ಎನ್.ಆರ್.ಡಬ್ಲ್ಯು. ಸ್ಕೀಮ್‌ನಲ್ಲಿ ಹತ್ತನೆ ಒಂದು ಭಾಗ ತಾವು ಕೊಟ್ಟರೆ, ಹತ್ತನೇ ಒಂಬತ್ತು ಅಂಶ ಅವರಿಂದಲೇ ಬರತಕ್ಕದ್ದು.

AFFAIRS OF MYSORE AND MINERVA MILLS CO-OPERATIVE SOCIETIES.

257. Sri K. SRIRAMULU (Gandhinagar).—

Will the Minister for Co-operation be pleased to state :—

(*a*) the date on which the elections to the Co-operative Societies of Mysore and Minerva Mills was held ;

(*b*) if not, the action taken in this behalf ;

(*c*) the dues of the Shareholders to the above Societies ; the amount of loans obtained by these Societies from outside :

(*d*) whether any of the office bearers of the said Societies have obtained 20 to 30 thousand rupees per head illegally ;

(*e*) if so, the action taken by the Government against them ;

(*f*) whether the office bearers and employees of the said Societies have acquired properties illegally ; whether the Government are already aware of the details and the future action of the Government in this behalf ;

(SRI K. SRIRAMULU)

(*g*) whether the affairs of the Societies are conducted by the elected members, the amount of loans obtained by the office bearers and employees of the said Societies irregularly ?

Sri C. N. PATIL (Minister for Co-operation).—

(*a*) *Mysore Mills Co-operative Society.*	*Minerva Mills Co-operative Society.*
13-7-1964.	22-4-1974.
(*b*) Executive Committee has been superseded.	Does not arise.
(*c*) Rs. 4,04,193—40 ..	Rs. 1,69,142—00.
Rs. 5,62,991—19 ..	Rs. 1,28,860—00.
(*d*) Yes	No.
(*e*) Cases have been filed ..	Does not arise.
(*f*) Not come to the notice of the Government.	Not come to the notice of the Government.
(*g*) The affairs of the Society are not conducted by the elected members. The question of loans is under investigation.	The affairs of the Society are conducted by the elected members. Neither the employees nor the office bearers have taken loan.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ (ಉ)ಗೆ ಉತ್ತರವಾಗಿ ದಾವಾ ಹಾಕಲಾಗಿದೆ ಎಂದು ಹೇಳಿದ್ದೀರಿ. ಯಾರ ಯಾರ ಮೇಲೆ ಎಷ್ಟೆಷ್ಟು ಹಣಕ್ಕೆ, ಯಾವ ಯಾವ ಸೊಸೈಟಿಯಲ್ಲಿ ಕೊಡಬೇಕು ಎಂದು ದಾವ ಹಾಕಿದ್ದೀರಿ ಎಂದು ಹೇಳುತ್ತೀರಾ ಸ್ವಾಮಿ ?

† ಶ್ರೀ ಸಿ. ಎನ್. ಪಾಟೀಲ್.—ಇನ್ನೂ ತನಿಖೆ ಪೂರ್ತಿಯಾಗಿಲ್ಲ, ತನಿಖೆ ನಡೆಯುತ್ತಾ ಇದೆ ಅಂಕೆ ಅಂಶ ಒದಗಿಸಿಲ್ಲ, ನೋಟೀಸ್ ಕೊಟ್ಟರೆ ಕೊಡುತ್ತೇನೆ.

ಶ್ರೀ ಕೆ.ಶ್ರೀರಾಮುಲು.—ದಾವ ಹಾಕಲಾಗಿದೆ ಎಂದು ಹೇಳಿದ್ದೀರಿ. ಯಾರ ಯಾರ ಮೇಲೆ ದಾವಾ ಹಾಕಿದ್ದೀರಿ ಎಂದು ಹೇಳಿದ್ದಕ್ಕೆ ನನ್ನ ಹತ್ತಿರ ವಿವರ ಎಲ್ಲ ಎಂದು ಹೇಳುತ್ತೀರಿ. ರಿಕಾರ್ಡ್ ತರಿಸು ವವರೆಗೂ ಈ ಪ್ರಶ್ನೆಯನ್ನು ತಡೆಹಿಡಿಯಬೇಕು.

ಶ್ರೀ ಸಿ. ಎನ್. ಪಾಟೀಲ್.—ನೋಟಿಸ್ ಕೊಟ್ಟರೆ ವಿವರ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ,— ರಾಯರ್ ನೋಟೀಸ್ ಕೊಡಬೇಕೇ ?

ಅಧ್ಯಕ್ಷರು.—ನೋಟೀಸ್ ಅಂದರೆ ರಾಯರ್ ನೋಟೀಸ್ ಏನು ಬಂಗಾರಪ್ಪನವರೇ ? ಈ ತರಹ ನಡೆವಳಿಕೆ ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ—ಉಪ ಪ್ರಶ್ನೆ ಕೇಳಿದರೆ ಉತ್ತರ ಏಕೆ ಕೊಡಬಾರದು ? ನೋಟೀಸ್ ಬೇಕು ಎಂದರೆ ಅರ್ಥ ಏನು ?

ಅಧ್ಯಕ್ಷರು.—ತಮಾಷೆ ಮಾಡುವುದಕ್ಕೂ ಒಂದು ಮಿತಿ ಇರಬೇಕು

ಶ್ರೀ ಸಿ. ಎನ್. ಪಾಟೀಲ್—ಯಾರ ಯಾರ ಮೇಲೆ ದಾವ ಹಾಕಿದ್ದೇವೆ ಎನ್ನುವ ಪ್ರಿಂಚಿಡ್ ಲಸ್ಟ್ ಕೊಡುತ್ತಿದ್ದೆ, ಬೇರೆ ಪ್ರಶ್ನೆ ಹಾಕಿದರೆ ಕೊಡುತ್ತೇನೆ.

ಶ್ರೀ ಎಂ. ಎಸ್ ಕೃಷ್ಣನ್—ತಾವು ಕೇಸ್‌ಗಳನ್ನು ಹಾಕಿದ್ದೇವೆಂದು ಹೇಳಿದ್ದೀರಿ, ಯಾರ ಯಾರ ಮೇಲೆ ಯಾವ ಯಾವ ಕೇಸುಗಳನ್ನು ಹಾಕಿದ್ದೀರಿ ಎಂದು ದಯವಿಟ್ಟು ವಿವರಣೆಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಸಿ. ಎನ್. ಪಾಟೀಲ—ಪ್ರತ್ಯೇಕ ಪ್ರಶ್ನೆ ಹಾಕಿದರೆ ಕೊಡುತ್ತೇನೆ

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ (ಈ)ಗೆ ಉತ್ತರವಾಗಿ ಹೌದು. ಎಂದು ಹೇಳಿದ್ದೀರಿ 20,000–30,000 ರೂಪಾಯಿ ಆಫೀಸ್ ಬೇರರ್‌ನ ತೆಗೆದುಕೊಂಡಿದ್ದಾರೆ. ಅವರು ಯಾರು ಯಾರು ಎಂದು ದಯಮಾಡಿ ಅವರು ಹೆಸರುಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಸಿ. ಎನ್. ಪಾಟೀಲ್—ತನಿಖೆ ಇನ್ನೂ ನಡೆಯುತ್ತಾ ಇದೆ, ಸೂಪ್ರೆಂಟಿ ಸೂಪರ್‌ಸೀಡ್ ಮಾಡರಾಗಿದೆ ತನಿಖೆ ಪೂರ್ತಿಯಾದ ನಂತರ ಲಿಸ್ಟ್ ಕೊಡುತ್ತೇನೆ, ತನಿಖೆ ಇನ್ನೂ ಪೂರ್ತಿಯಾಗಿಲ್ಲ, ತಾವು ಎಷ್ಟಕ್ಕೆ ಕೇಳಿದ್ದೀರೋ ಅಷ್ಟಕ್ಕೆ ಉತ್ತರ ಕೊಟ್ಟಿದೆ ವಿವರ ಕೇಳುತ್ತಾ ಇದ್ದೀರಿ ಉತ್ತರ ಕೊಡುತ್ತೇನೆ.

ಶ್ರೀ ಕೆ. ಶ್ರೀರಾಮುಲು.—1964ನೇ ಇಸವಿಯಲ್ಲಿ ಚುನಾವಣೆ ನಡೆಯಿತು. ಈಗ 1973ನೆ ಇಸವಿಯಲ್ಲಿ 1964 ನೇ ಇಸವಿಯಲ್ಲಿ ಪಡೆದ ಸಾಲವನ್ನು ಈಗ ತಾವು ಕಾರ್ಮಿಕರ ಕಡೆಯಿಂದ, ಷೇರ್‌ಹೋಲ್ಡರ್ಸ್ ಕಡೆಯಿಂದ ವಸೂಲು ಮಾಡುವುದು ಸೊಸೈಟಿ ಕಾನೂನಿಗೆ ವಿರೋಧ ವಲ್ಲವೇ ?

ಶ್ರೀ ಸಿ. ಎನ್. ಪಾಟೀಲ್.—ಟೈಂ ಬಾರ್ ಆಗಿದ್ದರೆ ವಸೂಲು ಮಾಡಲಿಕ್ಕೆ ತೊಂದರೆಯಾಗುತ್ತದೆ. ಏಕೆಂದರೆ ಇದಕ್ಕೆ ಟೈಂ ಬಾರ್ ಅನ್ವಯವಾಗುತ್ತದೆ.

BLACKMARKETING IN FOODGRAINS

545. Sri M. S. KRISHNAN (Malleswaram).—

Will the Minister for Food and Forests be pleased to state :—

(*a*) whether the Government is aware that there is black-marketing in foodgrains, such as rice, sugar, wheat, etc.;

(*b*) whether the Government has taken action against black-marketeers and hoarders in the State;

(*c*) if so, the number of hoarders unearthed since the last six months in the State (Districtwise figures may be given) and the quantity dehoarded (Districtwise figures may be given);

(*d*) whether the Government is contemplating to take the co-operation of the people and different mass organisations such as Trade Unions, Youths Organisations, etc., to unearth the hoarded foodgrains; if so, in what manner ?